# ಕರ್ನಾಟಕ ವಿಧಾನ ಪರಿಷತ್ತು

08ನೇ ಫೆಬ್ರವರಿ 2019
ಶುಕ್ರವಾರ

**ವಿಷಯಾನುಕ್ರಮಣಿಕೆ**

1. ವಿತ್ತೀಯ ಕಾರ್ಯಕಲಾಪ

2019-2020 ನೇ ಸಾಲಿನ ಆಯವ್ಯಯ ಅಂದಾಜುಗಳ ಮಂಡನೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು)

~~~~~~~

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~~~

**(11) 08/02/2019/4:00/ ಎಸ್‌ಪಿಆರ್(ಎಸ್‌ಕೆ) – ಕೆಎಸ್(ವಿಕೆ)**

# ಕರ್ನಾಟಕ ವಿಧಾನ ಪರಿಷತ್ತು

**ಶುಕ್ರವಾರ, 8ನೇ ಫೆಬ್ರವರಿ, 2019**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಸಂಜೆ 4 ಗಂಟೆ 06 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~~

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಕೇಳಬಯಸುವುದೇನೆಂದರೆ, ...

**(ಗೊಂದಲ)**

**ಸಭಾಪತಿಯವರು:–** ಈಗ ವಿತ್ತೀಯ ಕಾರ್ಯಕಲಾಪ. 2019–2020ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಸದನಕ್ಕೆ ಒಪ್ಪಿಸುವುದು.

## 1.ವಿತ್ತೀಯ ಕಾರ್ಯಕಲಾಪ

### 2019–2020ನೇ ಸಾಲಿನ ಆಯವ್ಯಯ ಅಂದಾಜುಗಳ ಮಂಡನೆ

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೇ, 2019–2020ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**(ಪ್ರತಿಯನ್ನು ಲಗತ್ತಿಸಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಒಂದು ಮಾತನ್ನು ಹೇಳುವುದೇನೆಂದರೆ, 'ಶತಮಾನದ ಇತಿಹಾಸವಿರುವ ಮೇಲ್ಮನೆ' ಎನ್ನುವಂತಹ ಮಾತೇನಿದೆ, ಇದು ಸತ್ಯವಾದ ಮಾತು. ಇಂತಹ ಮೇಲ್ಮನೆಯಲ್ಲಿ ನಾವು ಸದಸ್ಯರಾಗಿದ್ದೇವೆ. ಈ ರಾಜ್ಯ ಮಾನ್ಯ ಕೆ.ಸಿ.ರೆಡ್ಡಿಯವರಿಂದ ಪ್ರಾರಂಭವಾಗಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರೆಗೆ ಒಟ್ಟು 22 ಮುಖ್ಯಮಂತ್ರಿಗಳನ್ನು ಕಂಡಿದೆ. ಅಂದಿನಿಂದ ಇಲ್ಲಿಯವರೆಗೆ ಮೇಲ್ಮನೆ ಹಾಗೂ ಕೆಳಮನೆಯ ಯಾವುದೇ ಶಾಸಕರ ಹಕ್ಕನ್ನು ಕಸಿದಿರುವಂತಹ ಉದಾಹರಣೆಗಳಿಲ್ಲ. **(ಗೊಂದಲ)** ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ರಾಜ್ಯದ 22ನೆಯ ಮುಖ್ಯಮಂತ್ರಿಗಳಾಗಿದ್ದಾರೆ. ಶತಮಾನದ ಇತಿಹಾಸವಿರುವಂತಹ ಈ ಸದನದಲ್ಲಿ ಇಲ್ಲಿಯವರೆಗೆ ಯಾವ ಮುಖ್ಯಮಂತ್ರಿಯವರು ಸಹ ಶಾಸಕರ ಹಕ್ಕನ್ನು ಕಸಿದಿರಲಿಲ್ಲ. ಹಿಂದೆಂದೂ ಗೌಪ್ಯತೆಯ ಹೆಸರಿನಲ್ಲಿ ಬಜೆಟ್ ಪುಸ್ತಕವನ್ನು ಕೊಡದೇ, ಇಂತಹ ಅನಾಹುತಗಳು ನಡೆದಿದ್ದಿಲ್ಲ; ಸಂಪ್ರದಾಯಗಳನ್ನು ಮೀರಿದ್ದಿಲ್ಲ. ಈ ದಿನ ಮಾನ್ಯ ಮುಖ್ಯಮಂತ್ರಿಯವರು ಕೆಳ ಮನೆಯಲ್ಲಿ ಆಯವ್ಯಯದ ಮೇಲಿನ ಭಾಷಣದ ಸಂದರ್ಭದಲ್ಲಿ ಅದರ ಪ್ರತಿಗಳನ್ನು ಅಲ್ಲಿನ ಸದಸ್ಯರಿಗೆ ನೀಡದಂತೆ ಅನುಸರಿಸಿದ ಕ್ರಮವೇನಿದೆ ಇದು ಸರಿಯಾದುದಲ್ಲ. ದಯಮಾಡಿ ಅವರು ಇಂತಹ ವ್ಯವಸ್ಥೆಯನ್ನು, ಈ ಸಂಪ್ರದಾಯ ಹಾಗೂ ಪರಂಪರೆಯನ್ನು ಮುರಿಯಲಿಕ್ಕೆ, ಶಾಸಕರ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದ್ದಂತಹ ಅಗತ್ಯವಾದರೂ ಏನು? ನಮಗೆ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಗೌರವವಿದೆ. ಆದರೆ ಈ ಸಂಪ್ರದಾಯವನ್ನು ಮುರಿದಿರುವ ಬಗ್ಗೆ ಪ್ರಶ್ನೆ ಮಾಡಿದರೆ, ಅವರು ಬಾಯಿಗೆ ಬಂದ ಹಾಗೆ ಉತ್ತರವನ್ನು ಕೊಡುತ್ತಾರೆಯೇ? ಇದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:–** ಈಗ ಸದನವನ್ನು ಸೋಮವಾರ, ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 8 ನಿಮಿಷಕ್ಕೆ ಮುಕ್ತಾಯಗೊಂಡು,**
**ಪುನಃ ದಿನಾಂಕ 11ನೇ ಫೆಬ್ರವರಿ ಮಾಹೆ 2019ರ ಸೋಮವಾರದಂದು**
**ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"